ಹಬ್ಬ ಹರಿದಿನ ಅಥವಾ ಎಲ್ಲಾದರೂ ಪ್ರವಾಸ ಹೋದರೆ ಮನೆ ಮಂದಿಗೆಲ್ಲ ಬಟ್ಟೆ ತರುತ್ತಿದ್ದೆ. ಅಪ್ಪನಿಗೂ ಪ್ರತಿ ತಿಂಗಳು ಸಾವಿರ ರೂಪಾಯಿ ಕೊಡುತ್ತಿದ್ದೆ. ಆಗ ನನ್ನ ಕಾಲ ನಡೆಯುತ್ತಿತ್ತು. ನನ್ನ ಹತ್ತಾರು ಕತೆಗಳು ಎಲ್ಲ ಪತ್ರಿಕೆಗಳಲ್ಲೂ ಸ್ಪರ್ಧೆ ಎಂಬಂತೆ ಪ್ರಕಟವಾಗುತ್ತಿದ್ದವು. ನಾನು ಆ ಮಟ್ಟಿಗೆ ಖ್ಯಾತನಾಗಿದ್ದೆ. ಊರಿನ ಎಲ್ಲ ಕಲೆ, ಕವನ, ಸಾಹಿತ್ಯಗೋಷ್ಠಿ, ನಾಟಕ ಪ್ರದರ್ಶನ ಎಲ್ಲದರಲ್ಲೂ ನಾನೇ. ಆದರೆ, ನಾಗಣ್ಣನನ್ನು ನನ್ನ ಈ ಸೆಲೆಬ್ರೆಟಿ ಸ್ಟೇಟಸ್ ಎಂದೂ ವಿಚಲಿತನಾಗಿಸಲಿಲ್ಲ. ಅವನು ಏನೂ ಓದುತ್ತಿರಲಿಲ್ಲ. ಓದುವ ಅಭ್ಯಾಸವೇ ಅವನಿಗೆ ಇರಲಿಲ್ಲ. ಇದರಿಂದ ನಾನೇ ಒಂದು ಸಣ್ಣ ಮಟ್ಟಿನ ಅಸಡ್ಡೆಯನ್ನೇ ಬೆಳೆಸಿಕೊಂಡೆ. ಅವನಿಗೆ ಏನೂ ಗೊತ್ತಾಗುವುದಿಲ್ಲ ಎಂದೇ ಭಾವಿಸಿದೆ. ಹೀಗೆ, ನನ್ನ ಬದುಕಿನ ಅವಿಭಾಜ್ಯ ಅಂಗವಾಗಿದ್ದ ನಾಗಣ್ಣ, ನನ್ನ ಅಹಂಕಾರದ ಮೂಸೆಯಲ್ಲಿ ಎಲ್ಲೋ ಕಳೆದು ಹೋಗುತ್ತಿದ್ದ.

ಅವನಿಗೆ ಇದ್ದ ಕುತೂಹಲಗಳಾದರೂ ಅಷ್ಟೆ. ಯಾರದೋ ಮನೆಗೆ ದಪ್ಪ ಮೀಸೆಯ ಕಳ್ಳ ನುಗ್ಗಿದ್ದನಂತೆ! ಅವನನ್ನು ಮನೆಯವರೇ ಉಪಾಯದಿಂದ ರೂಮಿನಲ್ಲಿ ಕೂಡಿ ಹಾಕಿಬಿಟ್ಟರಂತೆ! ಎಲೆಕ್ಷನ್ ಸಮಯದಲ್ಲಿ, ನಮ್ಮೂರ ರಾಜಕಾರಣಿ ಕಿಟ್ ಬ್ಯಾಗಿನಲ್ಲಿ ಗರಿ ಗರಿ ನೋಟು ಜೋಡಿಸಿಟ್ಟುಕೊಂಡು ಬಂದವರಿಗೆಲ್ಲ ಹಂಚುತ್ತಿದ್ದನಂತೆ! ಇಂಥ ಸುದ್ದಿಗಳು ಅವನನ್ನು ಇಡೀ ದಿನ ಚಟುವಟಿಕೆಯಿಂದ, ಸಂತೋಷದಿಂದ ಇರುವಂತೆ ಮಾಡುತ್ತಿದ್ದವು. ಅವನ ಈ ಲೋಕ ಅದೆಷ್ಟೇ ಸುಂದರವಾಗಿದ್ದರೂ, ಅದರ ಹಿಂದಿನ ಮುಗ್ಧ ಪ್ರೀತಿ ನಮಗ್ಯಾರಿಗೂ ಮುಖ್ಯ ಅನ್ನಿಸಲೇ ಇಲ್ಲ.

ಕಾಲ ಬದಲಾಯಿತು. ಇವಳನ್ನು ಇಷ್ಟಪಟ್ಟು ಮದುವೆಯಾದ ಮೇಲೆ, ಇಡೀ ಪರಿವಾರವೇ ನಮ್ಮನ್ನು ವಿನಾಕಾರಣ ದೂರವಿಟ್ಟಿತು. ಆ ಹೊತ್ತಿಗೇ, ಗ್ರಹಚಾರವೆಂಬಂತೆ ತುಮಕೂರಿಗೆ ನನ್ನ ವರ್ಗಾವಣೆಯೂ ಆಯ್ತು. ನಾನೊಬ್ಬನೇ ಆಗಾಗ ತಿಪಟೂರಿಗೆ ಬಂದು ಹೋಗುತ್ತಿದ್ದೆ. ಅವರು ಎಂದೂ ಯಾರೂ ನಮ್ಮ ಮನೆಗೆ ಬರುತ್ತಿರಲಿಲ್ಲ.

'ಯಾಕೆ ಸದಾ ನೀನೇ ಮೇಲೆ ಬಿದ್ದು ಹೋಗ್ತೀಯ? ಸ್ವಲ್ಪಾನೂ ಆತ್ಮಾಭಿಮಾನ ಬೇಡವಾ ನಿನಗೆ?' ಅಂದಳು ಇವಳು. ನನ್ನ ಕುರುಡುಗಣ್ಣಿಗೆ ಯಾವ ವ್ಯತ್ಯಾಸವೂ ಕಾಣಲೇ ಇಲ್ಲ.

ಟಕ್ ಟಕ್ ಎಂದು ಬಾಗಿಲು ಬಡಿದಳು ಇವಳು. ಬಾಗಿಲು ತೆರೆದೆ.

'ಸರಿ, ನೀನು ಹೋಗಿ ಬರೋದಾದ್ರೆ, ನನಗೇನೂ ಬೇಜಾರಿಲ್ಲ' ಅಂದಳು. ನಾನು ಮಾತಾಡಲಿಲ್ಲ.

'ನಮ್ಮನ್ನು ವಿನಾಕಾರಣ ದೂರ ಇಟ್ಟಿದ್ದಾರೆ ಅವರು. ನಮ್ಮ ಮಗನಿಗೆ ಸರ್ಕಾರದ ಉನ್ನತ ಉದ್ಯೋಗ ದೊರಕಿ, ಊರಿನವರೆಲ್ಲ ಸಂಭ್ರಮಿಸಿದ್ದರೂ, ಅವರಿಗೆ ಏನೂ ಅನ್ನಿಸಲೇ ಇಲ್ಲ.'

ಅವಳ ಮಾತು ಸರಿ ಇತ್ತು. ನಾಗಣ್ಣನ ಮಗಳ ಮದುವೆಗೆ ನಾವು ಹೋಗಿದ್ದೆವಾದರೂ, ಯಾರಿಗೂ ನಮ್ಮ ಪರಿಚಯವೇ ಮಾಡಿಕೊಟ್ಟಿರಲಿಲ್ಲ. ಮಗನ ಮದುವೆಗೆ ಏಕೋ ನಮ್ಮನ್ನು ಆಹ್ವಾನಿಸಿಯೇ ಇರಲಿಲ್ಲ. 'ಪದೇ ಪದೇ ಮೇಲೆ ಬಿದ್ದ ಹೆಣ್ಣು, ಮೂರು ಕಾಸಿಗೂ ಬೇಡ ಅನ್ನೋ ಮಾತು ಕೇಳಿದೀಯ?' ಅಂದಳು ಇವಳು. ದಾರಿ ಈಗ ಸ್ಪಷ್ಟವಾಗಿ ಕವಲಾಗಿತ್ತು. ಅದಕ್ಕೇ ಏನೋ ಸರ್ವಜ್ಞ, ಕರೆಯದೇ ಬರುವವನ ಕರೆದು ಕೆರದಿಂದ ಹೊಡೆ ಎಂದಿದ್ದು! ನನ್ನನ್ನು ಯಾರೂ ಬರಬೇಡ ಅನ್ನಲಿಲ್ಲ. ಆದರೆ ಅದನ್ನು ಭಾವದಿಂದ ವ್ಯಕ್ತಪಡಿಸಿದರು ಅಷ್ಟೆ. ಬಹಳ ವರ್ಷ ನನಗೆ ಅದು ಅರ್ಥವೂ ಆಗಲಿಲ್ಲ. ಬರ ಬರುತ್ತಾ ನಾನೇ ದೂರ ಉಳಿಯಲಾರಂಭಿಸಿದೆ. ನನ್ನ ಬೇರುಗಳನ್ನು ನಾನೇ ಬಲವಂತವಾಗಿ ಕಡಿದುಕೊಂಡೆ.

'ಇವತ್ತು ಆರನೆಯ ದಿನ. ಹತ್ತನೇ ದಿನದವರೆಗೂ ಪೋಸ್ಟ್ ನೋಡು ಪರವಾಗಿಲ್ಲ. ಆದರೆ,